
"ಹಚ್ಯಾ! ಹೋಗತ್ಲಗೆ ದರಿದ್ರದ್ದೇ! ಯಾವ ಹಡ್ಬೇಗ್ಹುಟ್ಟಿದ್ದೇನ" ಎನ್ನುತ್ತಾ ಮನೆಯೊಳಗಿಂದ ದಾಂಗುಡಿಯಿಟ್ಟ ಮಾರ್ಬಲ್ ರಾಯರು, ಕಾಲಿಗಡರಿದ ಕೋಲನ್ನು ಕೈಗೆತ್ತಿಕೊಂಡು ಬೀಸುತ್ತಿದ್ದಂತೆಯೇ ಅಂಗಳದ ಗಿಡ ಪೊದರುಗಳಂಚಿನಿಂದ ಎರಡು ನಾಯಿಗಳು ಪರಾರಿಯಾದವು. ಎಂದ ಮಾತ್ರಕ್ಕೆ ಮಾರ್ಬಲ್ ರಾಯರ ಮಂತ್ರಾಕ್ಷತೆ ನಿಲ್ಲಲಿಲ್ಲ. ಅದರಲ್ಲೂ ತಮ್ಮನೆ ಅಂಗಳದಿಂದ ಕಾಲ್ಕಿತ್ತ ನಾಯಿಗಳು ನೆರೆಮನೆಯ ಭವಾನಿಯಮ್ಮನ ಅಂಗಳಕ್ಕೆ ಬಿಜಯಂಗೈದುದ ಕಂಡ ಮಾರ್ಬಲರಾಯರ ವಾಗ್ಝರಿ, ತೊರೆಯಾಗಿ, ನದಿಯಾಗಿ, ಜಲಪಾತವಾಗಿ ಭೋರ್ಗರೆಯತೊಡಗಿತು.

"ಕುನ್ನೀಗೆ ಕೆಲಸಿಲ್ಲೆ. ಕುಂಡ್ರಲ್ಲೆ ಹೊತ್ತಿಲ್ಲೆ ಹೇಳಿ ಸುಮ್ನೆ ಮಾಡಿದ್ದಲ್ಲ ಗಾದೇನ. ಬೆಳಗೊಂದು ಅಪ್ಪದೇ ತಡ, ಸುತ್ತಿನ ಹತ್ತೂರಲ್ಲಿ ಯಾರ್‍ಯಾರ ಮನೆಲ್ಲಿ ಹಲಶಿನ್ಕಾಯಿ ಬೆಳದ್ದು, ಬಾಳೇಕಾಯಿ ಬೆಳದ್ದು ಹೇಳಿ ಸರ್ವೇ ಶುರು. ಇವಕ್ಕೆ ಮಾಡಲ್ಲೆ ಕಸುಬಿಲ್ಲದಿದ್ರೆ ಊರ್ಮಂದಿಗೆ ಇರ್ತಲಿ. ಹಪ್ಪಳಾದ್ಮೇಲೆ ಸಂಡಿಗೆ, ಸಂಡಿಗ್ಯಾದ್ಮೇಲೆ ಹಪ್ಪಳ!



ಕಲೆ: ಮುರಳೀಧರ ರಾಠೋಡ್